ವಿಶಾಲ ಹುಲ್ಲುಗಾವಲು, ಹಸಿರು ದಿಬ್ಬಗಳು, ಮಧ್ಯದಲ್ಲಿ ಪ್ರಶಾಂತ ಯಾರಾನದಿ, ನೀಲ ಸಮುದ್ರತೀರ ಅಲ್ಲಲ್ಲಿ ಚೆಲುವಾದ ಮನೆಗಳ ಮೆಲ್ಬರ್ನ್ ನಗರ.. ಆಹಾ!

ಆಸ್ಟ್ರೇಲಿಯಾದ ಈ ಸುಂದರ ನಗರದ ಹವಾಮಾನ ಮಾತ್ರ ನೆಚ್ಚುವಂಥದ್ದಲ್ಲ. ದಿನವೊಂದರಲ್ಲೇ ಬಿರುಬೇಸಗೆ, ಕಡುಚಳಿ, ಜಡಿಮಳೆ.. ಅಬ್ಬಾ! ಈ ಹವಾಮಾನ ವೈಪರೀತ್ಯ ಮೆಲ್ಬರ್ನ್ ಜನರಿಗೆ ಒಗ್ಗಿಹೋದಂತಿದೆ. ಇಲ್ಲಿನ ಬಿಸಿಲು ಅಪಾಯಕಾರಿ. ಚರ್ಮದ ಕ್ಯಾನ್ಸರ್ ಉಂಟುಮಾಡಬಲ್ಲುದು.





ಯಾರಾನದಿ ದಡದಲ್ಲಿ ಬೃಹತ್ ಕಟ್ಟಡಗಳು



ಚಾಕೊಲೇಟ್ ವೈಭವ

ಪ್ರಖರ ಬಿಸಿಲಿಗೆ ಸನ್‌ಸ್ಕ್ರೀನ್ ಮುಲಾಮು ಬೇಕೇ ಬೇಕು.

ಆಸ್ಟ್ರೇಲಿಯನ್ನರು ಧೈರ್ಯಶಾಲಿಗಳು, ಅತ್ಯುತ್ಸಾಹಿಗಳು ಮತ್ತು ತುಂಬ ಸ್ನೇಹಪರರು. ಶರೀರಮಾಟ, ಆರೋಗ್ಯಕ್ಕೆ ತುಂಬ ಗಮನ ಕೊಡುತ್ತಾರೆ. ಮೋಜು ಪ್ರಿಯರು. ಕೆಲ ಸಲ ಇಲ್ಲಿ ನಾಲ್ಕಾರು ದಿನ ಮಳೆ ಮೋಡ ಮುಸುಕಿದ್ದು, ಇದ್ದಕ್ಕಿದ್ದಂತೆ ಒಂದು ಬೆಳಿಗ್ಗೆ ಸೂರ್ಯ ಹೊಳೆಯತೊಡಗುತ್ತಾನೆ.



ಮೇಪಲ್ ಮರದಲ್ಲಿ ಮುದ್ದು ಹಕ್ಕಿ